# ೧೯

# ನಮ್ಮೊಂದಿಗೆ

• ಡಾ. ಜ್ಯೋತಿ ಕೊದ್ನಾಪುರ (ಹೊನಗನಹಳ್ಳಿ)

*ಗುರುಬ್ರಹ್ಮಾ, ಗುರುವಿಷ್ಣು, ಗುರುದೇವೋ ಮಹೇಶ್ವರಃ*
*ಗುರು ಸಾಕ್ಷಾತ್ ಪ್ರರಬ್ರಹ್ಮ ತಸ್ಮೈ ಶ್ರೀಗುರುವೇ ನಮಃ"॥*

ಈ ಸೃಷ್ಟಿಯಲ್ಲಿ ಡಾ. ಎಂ.ಎಸ್.ಬಿ. ಅವರು ವೈದ್ಯರಿಗೆ ಗುರುಗಳಾಗಿ ಮತ್ತು ವೈದ್ಯಕೀಯ ಉಪಚಾರಕರಾಗಿ ವಿಜಯಪುರ ಜಿಲ್ಲೆಯಲ್ಲಿ ಜನ್ಮ ತಾಳುತ್ತಾರೆ. ಸಂಪೂರ್ಣ ವಿಜಯಪುರ ಜಿಲ್ಲೆಯ ಪ್ರತಿಯೊಂದು ಮನೆಯಲ್ಲಿ ಡಾ. ಎಂ.ಎಸ್.ಬಿ. ಎಂದು ಪ್ರಸಿದ್ಧ ವೈದ್ಯರಾಗಿ ತಮ್ಮ ಪ್ರಭಾವವನ್ನು ಬೀರುತ್ತಾರೆ. ತಮ್ಮ ಉಪಚಾರದ ಮೂಲಕ ಎಷ್ಟೋ ಜೀವಗಳ ಶರೀರ ಮತ್ತು ಮನಸ್ಸಿನ ದುಃಖವನ್ನು ಪರಿಹಾರ ಮಾಡಿದಂತಹ ಪುಣ್ಯಜೀವಿ.

ಪ್ರಾಚೀನತೆ, ನಿಷ್ಠೆ ದಯೆ, ಕರುಣೆ, ದೈವಿಕ ಪ್ರೇಮ ಮತ್ತು ವಿಶಾಲ ಮನೋಭಾವ ಹೊಂದಿರುವವರು. ತಮ್ಮ ಜೀವನದ ಕೊನೆಯ ಉಸಿರಿರುವವರೆಗೂ ಮಾನವ ಜನಾಂಗಕ್ಕಾಗಿ ಸೇವೆ ಸಲ್ಲಿಸಿದರು. ಸಾಮಾನ್ಯ ಮನುಷ್ಯರಂತೆ ಜೀವನ ನಡೆಸಿದರು. ಪ್ರತಿಯೊಬ್ಬರ ಮೇಲೆ ಅವರು ನಿರಪೇಕ್ಷ ಪ್ರೀತಿ ಮತ್ತು ಅಕ್ಕರೆ ತೋರುವುದನ್ನು ನಾನು ನೋಡಿದ್ದೇನೆ.

ಜನನ ಮತ್ತು ಮರಣದ ಮಧ್ಯ ಇರುವ ಜೀವನವನ್ನು ಸಾರ್ಥಕ ಮಾಡಿಕೊಂಡ ಪುಣ್ಯಾತ್ಮ ಡಾ. ಎಂ.ಎಸ್.ಬಿ. ಇವರು ರೋಗಿಗಳಿಗೆ ಉಪಚರಿಸುವುದು ಅಷ್ಟೇ ಅಲ್ಲದೆ ವೈದ್ಯವಿದ್ಯಾರ್ಥಿಗಳಿಗೆ ಗುರುಗಳಾಗಿ, ಮಾರ್ಗದರ್ಶಕರಾಗಿ ಹಾಗೂ ಪೋಷಕರಾಗಿ ವಿದ್ಯೆಯನ್ನು ಮತ್ತು ಜ್ಞಾನವನ್ನು ಧಾರೆಯೆರೆದರು. ನೂರಾರು ವೈದ್ಯವಿದ್ಯಾರ್ಥಿಗಳು ಪ್ರಸ್ತುತ ದೇಶ–ವಿದೇಶಗಳಲ್ಲಿ ತಮ್ಮ ಸೇವೆಯಿಂದ ಡಾ. ಎಂ.ಎಸ್.ಬಿ ಹೆಸರನ್ನು ಅಜರಾಮರಗೊಳಿಸಿದ್ದಾರೆ. ತಮ್ಮ ವಿಶಿಷ್ಟಬುದ್ಧಿ ಮತ್ತು



Scanned with CamScanner

ಸಾಟಿಯಿಲ್ಲದ ವೈದ್ಯಕೀಯ ಸಾಮರ್ಥ್ಯದಿಂದಾಗಿ ಬಿ.ಎಲ್.ಡಿ/ಇ. ಮೆಡಿಕಲ್ ಕಾಲೇಜಿನ ಯಶಸ್ವಿ ಆಡಳಿತಗಾರರಾಗಿ ಮೇಳೈಸಿದ ಶ್ರೇಷ್ಠ ವ್ಯಕ್ತಿ

ನಾವು ಅವರನ್ನು ಭೇಟಿಮಾಡಿದಾಗ ಒಬ್ಬರಿರಲಿ, ಇಬ್ಬರಿರಲಿ ಅಥವಾ ಇಪ್ಪತ್ತು ಜನರಿರಲಿ ವಿವಿಧ ವಿಷಯಗಳ ಬಗ್ಗೆ ಮಾತನಾಡುತ್ತಾ ನಮ್ಮನ್ನು ಹುರಿದುಂಬಿಸುತ್ತಿದ್ದರು. ಸದಾ ಹೊಸದಾದ ಮತ್ತು ವಿರಳವಾದ ಜ್ಞಾನವನ್ನು ಮುಖ್ಯವಾಗಿ ವೈದ್ಯಕೀಯ ಸಂಶೋಧನ, ಯೋಗ, ಆಧ್ಯಾತ್ಮ, ಅರ್ಥವ್ಯವಸ್ಥೆ ಇವೆಲ್ಲವುಗಳ ಬಗ್ಗೆ ಚರ್ಚಿಸುತ್ತಿದ್ದರು. ಅವರು ಮಾತನಾಡಲು ಪ್ರಾರಂಭ ಮಾಡಿದರೆಂದರೆ ನಾವೆಲ್ಲರೂ ಅವರು ಮಾತನಾಡುವುದನ್ನು ಮಂತ್ರಮುಗ್ಧರಾಗಿ ಕೇಳುತ್ತಿದ್ದೆವು. ನಮಗೆ ಉತ್ಸಾಹದ ಚಿಲುಮೆಯಾಗಿದ್ದರು. ಸದಾ ಸಿದ್ಧವಿರುವ ವಾಕ್-ಚತುರತೆ ಮತ್ತು ತಡೆಯಿಲ್ಲದ ಜ್ಞಾನದಿಂದ ಎಲ್ಲರ ಮನಸ್ಸನ್ನು ಆಕರ್ಷಿಸುತ್ತಿದ್ದರು. ಸದಾ ಅಧ್ಯಯನಶೀಲರಾಗಿದ್ದ ತಾವು ಸಂಪಾದಿಸಿದ ಜ್ಞಾನವನ್ನು ಇತರರೆಲ್ಲರಿಗೂ ಹಂಚಿಕೊಳ್ಳುತ್ತಿದ್ದರು. ತಮ್ಮ ಕೆಲಸದಲ್ಲಿ ಸದಾ ಶಿಸ್ತನ್ನು ತೋರುತ್ತಿದ್ದರು.

ಒಂದು ಕ್ಷಣ ಕಣ್ಣು ಮುಚ್ಚಿ ಡಾ. ಎಂ.ಎಸ್.ಬಿ ಅವರನ್ನು ಕಲ್ಪಿಸಿಕೊಂಡಾಗ ಅವರಲ್ಲಿರುವ ಶಿಸ್ತು, ಸಂಯಮ, ಪರಿಶ್ರಮ, ಉತ್ಸಾಹ, ಸದಾ ಹಸನ್ಮುಖಿ-ಯಾಗಿರುವುದು. ಬೇರೆಯವರಿಗೆ ಪ್ರೋತ್ಸಾಹ ನೀಡುವುದು,. ನಿಸ್ವಾರ್ಥ ಸೇವೆ, ಸತತ ಅಧ್ಯಯನಶೀಲರಾಗಿರುವುದು, ಸತತ ಅಧ್ಯಾಪನ ಮಾಡುವುದು, ಕೃಷಿಯಲ್ಲಿ ಆಸಕ್ತಿ ಮತ್ತು ಪ್ರೀತಿ, ಉಳಿತಾಯ ಪ್ರವೃತ್ತಿ, ಪ್ರಾಪಂಚಿಕ ಪ್ರಜ್ಞೆ ಮತ್ತು ವ್ಯವಹಾರ ಜ್ಞಾನ ಹೀಗೆ ನೂರಾರು ಗುಣಗಳ ಪಟ್ಟಿಯನ್ನು ಮಾಡಬಹುದು.

ನಾವು ಡಾ. ಎಂ.ಎಸ್.ಬಿ ಗುರುಗಳ ವಿದ್ಯಾರ್ಥಿಗಳಾಗಿ ಅವರ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಅವರೊಂದಿಗೆ ಸದಾ ನಮ್ಮೊಂದಿಗೆ ಈ ಗುಣಗಳ ಮೂಲಕ ಅಮರರನ್ನಾಗಿಸುತ್ತೇವೆ. ಈ ಸೃಷ್ಟಿಯಲ್ಲಿ ನಮಗೆ ಗುರುಗಳ ವಿದ್ಯಾರ್ಥಿಗಳಾಗಿ ಅವರಿಂದ ವಿದ್ಯಾ ಮತ್ತು ಜ್ಞಾನವನ್ನು ಪಡೆದ ನಾವು ಧನ್ಯ

ಶಬ್ದರೂಪಿ ಪುಷ್ಪಗಳನ್ನು ಈಶ್ವರನ ಚರಣಕ್ಕೆ ಅರ್ಪಿಸಿ ಪುಣ್ಯಾತ್ಮ ಡಾ. ಎಂ.ಎಸ್.ಬಿ ಗುರುಗಳ ಆತ್ಮಕ್ಕೆ ಪರಮಶಾಂತಿಯನ್ನು ನೀಡೆಂದು ಪ್ರಾರ್ಥಿಸುತ್ತೇನೆ.

•••



Scanned with CamScanner